ಶ್ರೀ ಶಿವಾನಂದ ಎಚ್. ಕೌಜಲಗಿ.—ಇದು ಏನು ಅಧ್ಯಕ್ಷರೇ ನಾವು ಏನು ಹೇಳಿದರೂ ಕೇಳುವುದಕ್ಕೆ ತಯಾರು ಇಲ್ಲ ಈ ಬಗ್ಗೆ ಒಂದು ವರದಿ ಕೊಡುವುದಕ್ಕೆ ತಯಾರು ಇಲ್ಲ. ಕೇಳಿದ್ದಕ್ಕೆಲ್ಲಾ ಪರಿಶೀಲನೆ ತರಿಸಿಕೊಡುತ್ತೇವೆ ಎಂದರೆ ಏನು ?

ಅಧ್ಯಕ್ಷರು.—ಕೌಜಲಗಿಯವರೇ ಸ್ವಲ್ಪ ತಾಳ್ಮೆಯಿಂದ ಇರಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾಳೆಯೇ ತರಿಸಿಕೊಡುತ್ತೇನೆ.

## ಸುಪ್ರೀಮ್ ಕೋರ್ಟಿನ ತೀರ್ಪಿನಂತೆ ಕೆ.ಎ.ಎಸ್. ಅಧಿಕಾರಿಗಳ ಪದೋನ್ನತಿಯ ಬಗ್ಗೆ ಸರ್ಕಾರ ಯಾವುದೇ ಕ್ರಮವನ್ನು ಕೈಗೊಳ್ಳದೇ ಇರುವುದು.

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೇ, ಗೋಣಾಳ ಭೀಮಪ್ಪ ಹಾಗೂ ಮತ್ತಿತರರ ಪ್ರಕರಣದ ಸಿವಿಲ್ ರಿಟ್ ಪಿಟಿಷನ್ ನಂ. ೧೧೮೮೬೬ಕ್ಕೆ ಸಂಬಂಧಿಸಿದಂತೆ ಆಗಸ್ಟ್ ೧೧-೧೯೮೭ ರಂದು ಸುಪ್ರೀಮ್ ಕೋರ್ಟ್ ನೀಡಿದ ತೀರ್ಪಿನಂತೆ ಸರ್ಕಾರದಿಂದ ನೇರ ನೇಮಕಾತಿಯಾದ ಕೆಎಎಸ್ ಕಿರಿಯ ಶ್ರೇಣಿ ಅಧಿಕಾರಿಗಳ ಪದೋನ್ನತಿಯ ಬಗ್ಗೆ ಸರ್ಕಾರವು ಯಾವುದೇ ಕ್ರಮವನ್ನು ಕೈಕೊಂಡಿಲ್ಲ ಇದರಿಂದ ನೇರವಾಗಿ ನೇಮಕಾತಿಯಾದ ಕೆಎಎಸ್ ಅಧಿಕಾರಿಗಳಿಗೆ (ಪ್ರಥಮ ದರ್ಜೆ) ತುಂಬಾ ಅನ್ಯಾಯವಾಗಿದೆ. ಈ ಅನ್ಯಾಯವನ್ನು ಸರಿಪಡಿಸಬೇಕಾದುದು ಸರ್ಕಾರದ ಕರ್ತವ್ಯವಾಗಿದೆ ಕಳೆದ ಆಗಸ್ಟ್‌ನಲ್ಲಿಯೇ ತೀರ್ಪು ದೂರ ಬಂದಿದ್ದರೂ ಸರ್ಕಾರ ಆದೇಶವನ್ನು ಜಾರಿಗೆ ತರುವಲ್ಲಿ ವಿಳಂಬ ಮಾಡಿದೆ ಇನ್ನು ಮುಂದಾದರೂ ಇದನ್ನು ಸರಿಪಡಿಸಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಭಾರತ ಸರ್ವೋಚ್ಚ ನ್ಯಾಯಾಲಯದ ಶ್ರೀ ಗೋಣಾಳ್ ಭೀಮಪ್ಪ ವಿರುದ್ಧ ಕರ್ನಾಟಕ ರಾಜ್ಯ ಪ್ರಕರಣದಲ್ಲಿ ದಿನಾಂಕ ೧೧-೮-೧೯೮೭ರಂದು ನೀಡಿದ್ದ ತೀರ್ಪಿನ ಅನುಸಾರ ಕರ್ನಾಟಕ ಆಡಳಿತ ಸೇವಾ (ಎ-ಸಮೂಹ-ಕಿರಿಯ ಶ್ರೇಣಿ) ಅಧಿಕಾರಿಗಳ ಕರಡು ಜ್ಯೇಷ್ಠತಾ ಪಟ್ಟಿಯನ್ನು ದಿನಾಂಕ ೮-೨-೧೯೮೮ ಸಂಖ್ಯೆ ಡಿಪಿಎಆರ್ ೫೭ ಎಸ್‌ಕೆಜಿ ೮೭ರ ಅಧಿಸೂಚನೆಯಲ್ಲಿ ಪ್ರಕಟಿಸಿ ಆ ಜ್ಯೇಷ್ಠತಾ ಪಟ್ಟಿಯಲ್ಲಿ ನೀಡಿರುವ ಜ್ಯೇಷ್ಠತೆಯಿಂದ ಬಾಧಿತರಾದ ಅಧಿಕಾರಿಗಳಿಂದ ಆರ್ಜಿಗಳನ್ನು ೧೫ ದಿನಗಳೊಳಗೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಆ ನಿಗದಿತ ಅವಧಿಯನ್ನು ಕೋರಿಕೆಯ ಮೇಲೆ ಮತ್ತೆ ದಿನಾಂಕ ೫-೩-೧೯೮೮ರವರೆಗೆ ವಿಸ್ತರಿಸಲಾಗಿತ್ತು. ಆ ಅವಧಿಯಲ್ಲಿ ೧೫೯ ಅಧಿಕಾರಿಗಳು ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ. ಪ್ರಸಕ್ತ ಆಕ್ಷೇಪಣೆಗಳು ಸರ್ಕಾರದ ಪರಿಶೀಲನೆಯಲ್ಲಿವೆ. ಸದ್ಯದಲ್ಲಿಯೇ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗುವುದು. ಅದಾದನಂತರ ಅಹರಾದ ಅಧಿಕಾರಿಗಳಿಗೆ ಪದೋನ್ನತಿ ನೀಡಲಾಗುವುದು. ಅಂತಿಮ ಜ್ಯೇಷ್ಠತಾ ಪಟ್ಟಿ ಪ್ರಕಟವಾಗುವವರೆಗೆ ಯಾವುದೇ ಬಡ್ತಿ ಪ್ರಕರಣಗಳನ್ನು ಪರಿಶೀಲಿಸಲು ಸಾಧ್ಯವಾಗುವುದಿಲ್ಲ.

## 3) ಉಡುಪಿ ತಾಲ್ಲೂಕು ಪ್ರಾದೇಶಿಕ ಸಾರಿಗೆ ಕಚೇರಿಗೆ ಪುತ್ತೂರಿನಲ್ಲಿ ಪ್ರತ್ಯೇಕ ನಿವೇಶನವನ್ನು ನೀಡುವುದು.

ಶ್ರೀ ವಸಂತ ವಿ. ಸಾಲಿಯಾನ್.—ಅಧ್ಯಕ್ಷರೇ, ಉಡುಪಿ ತಾಲ್ಲೂಕು ಪ್ರಾದೇಶಿಕ ಸಾರಿಗೆ ಕಚೇರಿಗೆ ಪುತ್ತೂರು ಗ್ರಾಮದಲ್ಲಿ ಸ್ಥಳ ಮಂಜೂರಾಗಿದ್ದು ಈ ನಿವೇಶನದ ಪಕ್ಕದಲ್ಲೇ ಹರಿಜನ ಶಾಲೆ ಇರುವುದರಿಂದ ಆ ಜಮೀನನ್ನು ಆಟದ ಮೈದಾನಕ್ಕೆ ನೀಡಬೇಕಾಗಿ ಶಾಲಾಭಿವೃದ್ಧಿ ಮಂಡಲಿಯವರು ಸರ್ಕಾರವನ್ನು ಒತ್ತಾಯಿಸಿದ್ದಾರೆ. ಇದರಿಂದಾಗಿ ಪ್ರಾದೇಶಿಕ ಸಾರಿಗೆ ಕಚೇರಿ ಕಟ್ಟಡ ಕಟ್ಟಿಸಲು ನಿವೇಶನ ಇಲ್ಲವಾಗಿದೆ. ಸರ್ಕಾರ ಕೂಡಲೇ ಉಡುಪಿ ಪ್ರಾದೇಶಿಕ ಸಾರಿಗೆ ಕಚೇರಿಗೆ ಪ್ರತ್ಯೇಕ ನಿವೇಶನ ಮಂಜೂರು ಮಾಡಿ ಸ್ವಂತ ಕಟ್ಟಡ ಕಟ್ಟಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀ ಸಾಗರ್.—ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಸ್ವಾಮಿ.